# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 706 ( 686 ) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| ವಿಷಯ | : | ಮಡಿಕೇರಿಯಲ್ಲಿ ನಿರ್ಮಾಣವಾಗುತ್ತಿರುವ ಕೊಡವ ಹೆರಿಟೇಜ್ ಕೇಂದ್ರದ ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ. |
| ಉತ್ತರಿಸುವ ದಿನಾಂಕ | : | 25-09-2020. |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ನಿರ್ಮಾಣವಾಗುತ್ತಿರುವ ಕೊಡವ ಹೆರಿಟೇಜ್ ಕೇಂದ್ರದ ಕಾಮಗಾರಿಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ಬಂದಿದ್ದಲ್ಲಿ, ಸದರಿ ಕಾಮಗಾರಿಯು ಅನುಮೋದನೆಗೊಂಡ ವರ್ಷ ಯಾವುದು? | ಸದರಿ ಕಾಮಗಾರಿಯು 2004-05ನೇ ಸಾಲಿನಲ್ಲಿ ಅನುಮೋದನೆಗೊಂಡಿರುತ್ತದೆ. |
| ಇ) | ಸದರಿ ಕಾಮಗಾರಿಗೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನದ ಸಂಪೂರ್ಣ ವಿವರ ನೀಡುವುದು; | ಸದರಿ ಕಾಮಗಾರಿಗೆ ಈವರೆವಿಗೂ ರೂ.253.54 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. |
| ಈ) | ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ ಹಾಗೂ ವಿಳಂಬಕ್ಕೆ ಕಾರಣಗಳೇನು; | 2004-05ನೇ ಸಾಲಿನಲ್ಲಿ ಮಡಿಕೇರಿಯ ಕೊಡವ ಹೆರಿಟೇಜ್ ಸೆಂಟರ್ ಅಭಿವೃದ್ಧಿ ಪಡಿಸುವ ರೂ.88.75 ಲಕ್ಷಗಳ ಅಂದಾಜು ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯ ಅನುಮೋದನೆ ನೀಡಿ, ರೂ 33.54 ಲಕ್ಷಗಳನ್ನು ಅನುಷ್ಠಾನ ಸಂಸ್ಥೆಯಾದ ಅರಣ್ಯ ವಸತಿ ಹಾಗೂ ವಿಹಾರಧಾಮಗಳ ಸಂಸ್ಥೆಗೆ ಬಿಡುಗಡೆ ಮಾಡಿದೆ. ನಿಗಧಿತ ಅವಧಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸದ ಕಾರಣ 2010-11ನೇ ಸಾಲಿನಲ್ಲಿ ಈ ಯೋಜನೆಯನ್ನು ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ಇವರ ಮೂಲಕ ಅನುಷ್ಠಾಗೊಳಿಸಲು ತೀರ್ಮಾನಿಸಿ ರೂ 33.54 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.<br>ಈ ಕಾಮಗಾರಿ ನಿರ್ಮಾಣಕ್ಕೆ ರೂ.145.00ಲಕ್ಷಗಳ ಮೊತ್ತದ ಅಂದಾಜುಪಟ್ಟಿಗೆ ದಿನಾಂಕ:18/08/2010ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇ-ಟೆಂಡರ್ ಮೂಲಕ ಗುತ್ತಿಗೆದಾರರಾದ ಶ್ರೀ ಎಂ. ಬಿ ಹೇಮಾಶಂಕರ್ ಕ್ಲಾಸ್ 1, |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಕಂಟ್ರಾಕ್ಟರ್, ಮೈಸೂರು ಇವರಿಗೆ ರೂ.1,44,10,825.81 ಮೊತ್ತಕ್ಕೆ ದಿನಾಂಕ: 12/09/2010 ರಂದು ಕಾರ್ಯದೇಶವನ್ನುನೀಡಿ12 ತಿಂಗಳ ಕಾಲಾವಕಾಶದೊಂದಿಗೆ (ಮಳೆಗಾಲ ಸೇರಿ) ವಹಿಸಲಾಗಿರುತ್ತದೆ.<br><br>ಈ ಕಾಮಗಾರಿಯಲ್ಲಿ ತಡೆಗೋಡೆ ನಿರ್ಮಾಣಕ್ಕೆ ಲ್ಯಾಟರೇಟ್ ಮೇಸನರಿ ಅಳವಡಿಸುವ ಪ್ರಸ್ತಾವನೆ ಮಾಡಲಾಗಿತ್ತು. ಕಾಮಗಾರಿಯ ನಿರ್ಮಾಣಕ್ಕೆ ವಹಿಸಿದ ಸ್ಥಳವು ಗುಡ್ಡದ ಮೇಲಿದ್ದರಿಂದ ಹಾಗೂ ಇಳಿಜಾರು ಪ್ರದೇಶದಲ್ಲಿ ಲ್ಯಾಟರೇಟ್ ತಳಪಾಯ ಹಾಕಿದಲ್ಲಿ ಜಾರುವ ಸಾಧ್ಯತೆ ಇದ್ದುದರಿಂದ ಈ ಕಾಮಗಾರಿಗೆ ಮರು ವಿನ್ಯಾಸದ ಅನುಮೋದನೆ ಕೋರಿ ದಿನಾಂಕ:23/12/2011 ರಂದು ಪ್ರಸ್ತಾವನೆ ಸಲ್ಲಿಸಿದ್ದು, ತಡೆಗೋಡೆಗಳನ್ನು ಕಾಂಕ್ರೀಟಿನಲ್ಲಿ ಅಳವಡಿಸುವಂತೆ ಮುಖ್ಯ ಇಂಜಿನಿಯರ್ ರವರು ದಿನಾಂಕ:26/04/2012 ಈ ಬದಲಾವಣೆಯಿಂದಾದ ವಿನ್ಯಾಸದಿಂದ ಕೆಲವು ಹೆಚ್ಚುವರಿ ಐಟಂಗಳು ಉದ್ಭವಿಸಿದ್ದು ಈ ಕಾಮಗಾರಿಗಳ ನಿರ್ವಹಣೆಗಾಗಿ ಹೆಚ್ಚುವರಿಯಾಗಿ ರೂ.1,24,72,050.40 ಗಳ ಅನುದಾನದ ಅವಶ್ಯಕತೆ ಉಂಟಾಗಿ ನಿರ್ಮಾಣಕ್ಕೆ ತಗಲುವ ಒಟ್ಟಾರೆ ರೂ.2,68.04,000/- ಗಳಿಗೆ ಪರಿಷ್ಕೃತ ಅಂದಾಜು ವೆಚ್ಚದ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.<br><br>ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯ ಅನುಸಾರ ಕೆಲಸವನ್ನು ಗುತ್ತಿಗೆದಾರರು ಪ್ರಾರಂಭಿಸಿ ಮಂದಗತಿಯಲ್ಲಿ ನಿರ್ವಹಿಸುತ್ತಿದ್ದರಿಂದ ಸದರಿ ಗುತ್ತಿಗೆದಾರರಿಗೆ ಹಲವಾರು ತಿಳುವಳಿಕೆ ನೋಟಿಸ್ ನೀಡಿದರೂಕಾಮಗಾರಿಯ ನಿರ್ಮಾಣ ಚುರುಕುಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಆಸಕ್ತಿ ವಹಿಸದ ಕಾರಣ ಸದರಿ ಗುತ್ತಿಗೆದಾರರ ಕರಾರನ್ನು ದಿನಾಂಕ:04/01/2016ರಂತೆ ಮುಖ್ಯ ಇಂಜಿನಿಯರ್ ರದ್ದುಗೊಳಿಸಲು ಕ್ರಮ ಕೈಗೊಂಡಿರುತ್ತಾರೆ.<br><br>ಗುತ್ತಿಗೆದಾರರು ಕಾಮಗಾರಿಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ ಗುತ್ತಿಗೆ ಕರಾರನ್ನು ದಿನಾಂಕ:27/11/2018 ರಲ್ಲಿ ರದ್ದುಗೊಳಿಸಲಾಗಿದೆ. ಗುತ್ತಿಗೆದಾರರು ಗೋಡೆ ಕಟ್ಟಡ ಹಾಗೂ ಮಂಗಳೂರು ಹಂಚಿನ ಛಾವಣಿ ಕಾಮಗಾರಿಯನ್ನು ಭಾಗಶಃ ನಿರ್ವಹಿಸಿರುತ್ತಾರೆ.<br>ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ, ಬಂದರು, ಮತ್ತು ಒಳನಾಡು ಜಲಸಾರಿಗೆ ಇಲಾಖೆ ಬೆಂಗಳೂರು ರವರು ಸಲ್ಲಿಸಿರುವ ರೂ.3,30,45,110.00 ಲಕ್ಷಗಳ ಪರಿಷ್ಕೃತ ಅಂದಾಜುಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ದಿನಾಂಕ: 27/05/2020 ರಂದು ಆದೇಶ ಹೊರಡಿಸಲಾಗಿದೆ.<br><br>ಮೇಲೆ ವಿವರಿಸಿರುವ ವಿವಿಧ ಕಾರಣಗಳಿಂದಾಗಿ ಕಾಮಗಾರಿಯ ಅನುಷ್ಠಾನ ಸಂಸ್ಥೆಗಳು, ಕಾಮಗಾರಿಯ ವಿನ್ಯಾಸ ಹಾಗೂ ಅಂದಾಜು ಪಟ್ಟಿಗಳಲ್ಲಿ ಅನೇಕ ಬಾರಿ ಬದಲಾವಣೆಗಳಾಗಿರುವುದು ವಿಳಂಬಕ್ಕೆ ಪ್ರಮುಖ ಕಾರಣಗಳಾಗಿರುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಉ) | ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಿ, ಲೋಕಾರ್ಪಣೆಗೊಳಿಸಲಾಗುವುದು? | ಉಳಿಕೆ ಕಾಮಗಾರಿಯನ್ನು ರೂ.97.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರ ನೀಡಿ, 10 ತಿಂಗಳ ಅವಧಿಗೆ ಪೂರ್ಣಗೊಳಿಸಲು ತಿಳಿಸಲಾಗಿದೆ. |

ಕಡತ ಸಂಖ್ಯೆ: ಟಿಓಆರ್ 202 ಟಿಡಿವಿ 2020

**(ಸಿ.ಟಿ.ರವಿ)**

ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು